ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಂಪನಿ ಕಾರ್ಯಾಲಯ, ಕೆ.ಆರ್.ವೃತ್ತ, ಬೆಂಗಳೂರು-560001.

ಸಂಖ್ಯೆ: ಬೆವಿಕಂ/ನಿ(ತಾಂ)/ಬಿಸಿ-2/2025-26/ CYS-01 ದಿನಾಂಕ: 27 OCT 2025

## ಸುತ್ತೋಲೆ

**ವಿಷಯ:** ವಿದ್ಯುತ್ ಸಾಮಗ್ರಿಗಳ ಖಾತರಿ ಅವಧಿ, ಗುಣಮಟ್ಟ ತಪಾಸಣೆ ಹಾಗೂ ಸಂಬಂಧಿಸಿದ ನಿರ್ದೇಶನಗಳ ಬಗ್ಗೆ.

**ಉಲ್ಲೇಖ:**
1. ಬೆವಿಕಂ/ಪ್ರುವ್ಯ(ವಿ)/ ನಿವ್ಯ: ಬೆವಿಕಂ/ಬಿಸಿ-16/332/2011-12/6685-99 ದಿನಾಂಕ: 09.11.2011.
2. ಬೆವಿಕಂ/ಪ್ರುವ್ಯ(ವಿ)(ಗು,ಪ್ರ&ಸು)/ಎಫ್-653/2012-13/ಸಿವೈಎಸ್-22 ದಿನಾಂಕ:15.05.2012.
3. ಬೆವಿಕಂ/ಪ್ರುವ್ಯ(ವಿ)/(ಗು,ಪ್ರ&ಸು)/ಬಿಸಿ-11/ಉಪ್ರುವ್ಯ-3/19-20/ಸಿವೈಎಸ್-12 ದಿನಾಂಕ: 29.04.2019.

************

ಉಲ್ಲೇಖದಲ್ಲಿ ವಿವರಿಸಿದಂತೆ, ಬೆವಿಕಂ ವ್ಯಾಪ್ತಿಯಲ್ಲಿ ಯಾವುದೇ ವಿದ್ಯುತ್ ಕಾಮಗಾರಿಗಳಿಗೆ ಗುಣಮಟ್ಟ ಹಾಗೂ ನಿಗದಿ ಪಡಿಸಿರುವ ಖಾತರಿ ಅವಧಿಯ ವಿದ್ಯುತ್ ಸಾಮಗ್ರಿಗಳನ್ನು ಉಪಯೋಗಿಸುವ ಬಗ್ಗೆ ವಿವರವಾದ ಮಾರ್ಗದರ್ಶನವನ್ನು ಉಲ್ಲೇಖದ ಅಧಿಕೃತ ಜ್ಞಾಪಕ ಪತ್ರಗಳಲ್ಲಿ ತಿಳಿಸಲಾಗಿರುತ್ತದೆ. ಆದಾಗ್ಯೂ ಸಹ, ಕ್ಷೇತ್ರದಲ್ಲಿ ನಿಗಮದಿಂದ ನೀಡುವ ನಿಯಮಗಳ ಹಾಗೂ ನಿಗಮ ಕಛೇರಿಯ ಸಭೆಗಳಲ್ಲಿ ತಿಳಿಸುವ ಮಾರ್ಗ ದರ್ಶನವನ್ನು ಪಾಲಿಸದೇ, ಬೆವಿಕಂಪನಿಯ ವಿದ್ಯುತ್ ಜಾಲಕ್ಕೆ ಗುಣಮಟ್ಟ ರಹಿತ ವಿದ್ಯುತ್ ಸಾಮಗ್ರಿಗಳ ಸೇರ್ಪಡೆಯಾಗುತ್ತಿರುವ ಬಗ್ಗೆ ದೂರುಗಳು ಬಂದಿರುತ್ತದೆ.

ಮುಂದುವರೆದು, ಬೆವಿಕಂನ ಕಾ ಮತ್ತು ಪಾ ಕ್ಷೇತ್ರ ಕಚೇರಿಗಳಲ್ಲಿ ಭೂಗತ (ಯುಜಿ) ಕೇಬಲ್‌ಗಳ ಖಾತರಿ ಅವಧಿಯನ್ನು (5 ವರ್ಷಗಳ ಅವಧಿ) ಸ್ಪಷ್ಟವಾಗಿ ಉಲ್ಲೇಖಿಸದಿರುವುದು ಮತ್ತು ಕಾ ಮತ್ತು ಪಾ ಕ್ಷೇತ್ರ ಇಂಜಿನಿಯರ್‌ಗಳು ಇದನ್ನು ಪಾಲನೆ ಮಾಡದಿರುವುದರಿಂದ ಕೇಬಲ್ ಹಾನಿಯಿಂದಾಗಿ ಹಲವಾರು ಸಮಸ್ಯೆಗಳು ಕ್ಷೇತ್ರದಲ್ಲಿ ಉಂಟಾಗುತ್ತಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಅಂತಹ ಸೇರ್ಪಡೆಗೊಂಡ ಸಾಮಗ್ರಿಗಳಿಂದ ಗರಿಷ್ಟ ಮಟ್ಟದ ಕಾರ್ಯಕ್ಷಮತೆಯ ಕೊರತೆಯಿಂದಾಗಿ, ಕಂಪನಿಯ ವಿದ್ಯುತ್ ಜಾಲದಲ್ಲಿ ವಿದ್ಯುತ್ ಅಡಚಣೆಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುವುದಲ್ಲದೆ ನಿಗಮಕ್ಕೂ ಸಹ ಆರ್ಥಿಕ ನಷ್ಟ ಉಂಟಾಗುತ್ತದೆ.

ಉಲ್ಲೇಖ (2) ರಲ್ಲಿ ಈಗಾಗಲೇ ತಿಳಿಸಿರುವಂತೆ ಸ್ವಯಂ ಕಾರ್ಯನಿರ್ವಹಣೆ/ಬಂಡವಾಳ/ DCW ಅಡಿಯಲ್ಲಿ ಕೈಗೊಳ್ಳುವ ವಿದ್ಯುತ್ ಕಾಮಗಾರಿಗಳ ಸಾಮಗ್ರಿಗಳ ಪರಿಶೀಲನೆಯ ಮೊದಲು ಸಂಬಂಧಿಸಿದ ಸಾಮಗ್ರಿಯ ಅನುಮೋದಿತ ತಾಂತ್ರಿಕ ವಿಶ್ಲೇಷಣೆ ಹಾಗೂ ರೇಖಾ ಚಿತ್ರವನ್ನು ಕಡ್ಡಾಯವಾಗಿ ಬೆವಿಕಂನ ಅಧಿಕೃತ ಜಾಲತಾಣದಲ್ಲಿ ಅನುಮೋದಿತ ಜಿಟಿಪಿ/ರೇಖಾ ಚಿತ್ರಗಳನ್ನು ಪಡೆದು ಸಾಮಗ್ರಿಗಳನ್ನು ಪರಿಶೀಲಿಸುವುದು ವಾಡಿಕೆ, ಅದರೆ ಪ್ರಸ್ತುತ ಕ್ಷೇತ್ರದಲ್ಲಿ ಯಾವುದೇ ಜಿಟಿಪಿ/ರೇಖಾ ಚಿತ್ರಗಳನ್ನು ಪಡೆಯದೇ, ಸಾಮಗ್ರಿಗಳನ್ನು ತಪಾಸಣೆ ಮಾಡದೇ ವಿದ್ಯುತ್ ಜಾಲದಲ್ಲಿ ಸ್ಥಾಪನೆ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಕೇವಲ ಜಂಟಿ ವಿವರಣಾ ಪಟ್ಟಿ ಮಾಡುವ ಸಮಯದಲ್ಲಿ ಮಾತ್ರ ಕ್ಷೇತ್ರಾಧಿಕಾರಿಗಳು ಕೆಲವೊಮ್ಮೆ ಹಾಜರಿದ್ದು, ಉಳಿದ ಎಲ್ಲಾ ಸಮಯದಲ್ಲಿ ಕಾಮಗಾರಿಯ ಕಾರ್ಯಗಳನ್ನು ನಿರ್ಲಕ್ಷಿಸುತ್ತಿರುವುದು ಬಹಳ ವಿಷಾಧಾನೀಯ.

ಇಂತಹ ಅಲಕ್ಷ್ಯ ಗಳಿಂದ ಸ್ಥಾಪನೆಯಾದ ಸಾಮಗ್ರಿಗಳು ಬಹುಬೇಗ ವೈಫಲ್ಯ ಹೊಂದಿ ಬೆವಿಕಂನ ಕಾರ್ಯದಕ್ಷತೆಗೆ ಧಕ್ಕೆ ಉಂಟುಮಾಡುವುದಲ್ಲದೆ, ಸಾರ್ವಜನಿಕರ ಜೀವಕ್ಕೂ ಸಹ ಅಪಾಯವನ್ನು ಆಹ್ವಾನಿಸುವಂತಾಗುತ್ತದೆ.

ಆದುದರಿಂದ ಈ ಸಮಸ್ಯೆಗಳನ್ನು ಸಂಪೂರ್ಣವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಈ ಕೆಳಗಿನ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಮತ್ತು ಇದನ್ನು ತಪ್ಪದೆ ಅನುಸರಿಸುವಂತೆ ಕಾ ಮತ್ತು ಪಾ ಕ್ಷೇತ್ರ ಇಂಜಿನಿಯರ್‌ಗಳಿಗೆ ಮತ್ತೊಮ್ಮೆ ಈ ಮೂಲಕ ಸೂಚಿಸಿದೆ.

ದೂರವಾಣಿ : 080-22354926 ಮೊಬೈಲ್ : 9449030425
ಇ–ಮೈಲ್ : dt@bescom.co.in dtbescom.work@gmail.com

1. ನಿಗಮದ ವಿದ್ಯುತ್ ಕಾಮಗಾರಿಗಳಿಗೆ ಮುಖ್ಯವಾಗಿ ಬಳಸುವ ವಿದ್ಯುತ್ ಸಾಮಗ್ರಿಗಳಾದ :-

| | |
|---|---|
| ➢ ವಿದ್ಯುತ್ ಪರಿವರ್ತಕಗಳು<br>➢ ಆರ್. ಎಂ.ಯು<br>➢ ಕಂಡಕ್ಟರ್ಸ್/ ಕವರ್ಡ್ ಕಂಡಕ್ಟರ್<br>➢ ಹೆಚ್ ಟಿ/ ಎಲ್ ಟಿ ಯು.ಜಿ./ಎ.ಬಿ. ಕೇಬಲ್ ಗಳು | 5 (ಐದು) ವರ್ಷ ಖಾತರಿ ಅವಧಿಯನ್ನು ಕಡ್ಡಾಯವಾಗಿ ಪಡೆಯಬೇಕು |

ಹಾಗೂ ಇತರೆ ಸಾಮಗ್ರಿಗಳಾದ ಹೆಚ್.ಟಿ/ಎಲ್.ಟಿ ಲೈನ್ ಹಾರ್ಡವೇರ್ ಮತ್ತು ಸ್ಟ್ರಕ್ಚರಲ್ ಸಾಮಗ್ರಿಗಳಿಗೆ ಅನುಮೋದಿಸಿದ ಜಿಟಿಪಿ/ರೇಖಾ ಚಿತ್ರಗಳ ಅನುಸಾರ ತಪಾಸಣೆ ಮಾಡಿ, ಸ್ವತಃ ಖಾತರಿ ಪಡಿಸಿಕೊಂಡು ಸಾಮಗ್ರಿಗಳನ್ನು ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳಿಸಬೇಕು.

2. ಸಕ್ಷಮ ಅಧಿಕಾರಿಗಳು ತಮ್ಮ ಕಛೇರಿಯಲ್ಲಿ ನೀಡುವ ವಿದ್ಯುತ್ ಮಂಜೂರಾತಿ ಪತ್ರದಲ್ಲಿ/ಕಾರ್ಯಾದೇಶದಲ್ಲಿ ವಿದ್ಯುತ್ ಸಾಮಗ್ರಿಗಳ ಖಾತರಿ ಅವಧಿಯನ್ನು 5 (ಐದು) ವರ್ಷವೆಂದು ಕಡ್ಡಾಯವಾಗಿ ನಮೂದಿಸಿ ಖಚಿತ ಪಡಿಸತಕ್ಕದ್ದು ಹಾಗೂ ತೈಲ ರಹಿತ ಪರಿವರ್ತಕಗಳು, ಕೇಬಲ್ ಎಂಟ್ರಿ ಟೈಪ್ ಪರಿವರ್ತಕಗಳು ಮತ್ತು ಸಿ.ಎಸ್.ಎಸ್ ಸಾಮಗ್ರಿಗಳಿಗೆ ಸಂಪೂರ್ಣ ಜೀವಿತಾವಧಿಯವರೆಗೆ ನಿರ್ವಹಿಸಲು ಗ್ರಾಹಕರಿಂದ ಮುಚ್ಚಳಿಕೆ ಪಡೆಯಬೇಕು ಮುಂದುವರೆದು ಗ್ರಾಹಕರಿಂದ ಪಡೆಯುವ ರೂ.500ರ ಛಾಪಾ ಕಾಗದದಲ್ಲಿ ವಿದ್ಯುತ್ ಸಾಮಗ್ರಿಗಳಿಗೆ ಜೀವಿತಾವಧಿಯ ಖಾತರಿಯನ್ನು ಪ್ರಮಾಣಿಕರಿಸಿ ಪಡೆಯತಕ್ಕದ್ದು.
3. ಕ್ಷೇತ್ರದಲ್ಲಿ ಗುಣಮಟ್ಟ ರಹಿತ ವಿದ್ಯುತ್ ಸಾಮಗ್ರಿಗಳು ವಿದ್ಯುತ್ ಜಾಲಕ್ಕೆ ಸೇರ್ಪಡೆಯಾಗದಂತೆ ಸಂಬಂಧಿಸಿದ ವಿದ್ಯುತ್ ಸಾಮಗ್ರಿಗಳ ವಿವರ ಪಡೆಯಲು ಬೆವಿಕಂನ ಅಧಿಕೃತ ಜಾಲತಾಣದಲ್ಲಿ ಅಪ್ಲೋಡ್ ಮಾಡಿರುವ ವಿದ್ಯುತ್ ಸಾಮಗ್ರಿಗಳ ತಾಂತ್ರಿಕ ವಿಶ್ಲೇಷಣೆ/ರೇಖಾ ಚಿತ್ರಗಳ ಪ್ರತಿಯನ್ನು ಪಡೆಯುವುದು ಅಥವಾ ಗುಣಮಟ್ಟ,ಪ್ರಮಾಣಿತ ಮತ್ತು ಸುರಕ್ಷತೆ ಶಾಖೆಯನ್ನು ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವುದು.
4. ಕಾ ಮತ್ತು ಪಾ ಕ್ಷೇತ್ರ ಇಂಜಿನಿಯರ್‌ಗಳು ಕೇಬಲ್‌ಗಳನ್ನು ಸ್ಥಾಪನೆ ಮಾಡುವ ಮೊದಲು ಸ್ವತಃ ತಪಾಸಣೆಯನ್ನುಕಾರ್ಯಕ್ಷೇತ್ರದಲ್ಲಿ/ಉಗ್ರಾಣದಲ್ಲಿ ಪರಿಶೀಲನೆ ಮಾಡಬೇಕು ಮತ್ತು ಅವುಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ಕೇಬಲ್ ತಯಾರಕರಿಂದ ಗುಣಮಟ್ಟದ ಖಾತರಿ ಅವಧಿಯ ಬಗ್ಗೆ ದೃಢೀಕರಣ ಪತ್ರ ಪಡೆಯಬೇಕು. ಈ ಸಂಬಂಧ ಯಾವುದೇ ರಾಜಿ ಅಥವಾ ಅಲಕ್ಷ್ಯವಹಿಸದೆ ಕ್ರಮವಹಿಸುವುದು ಎಲ್ಲಾರ ಜವಾಬ್ದಾರಿಯಾಗಿರುತ್ತದೆ.
5. ಎಲ್ಲಾ ವಾ, ಕಾ & ಪಾ ವಲಯಗಳ ಮುಖ್ಯ ಇಂಜಿನಿಯರ್(ವಿ) ಮತ್ತು ವಾ, ಕಾ & ಪಾ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ) ರವರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಮೇಲಿನ ಮಾರ್ಗಸೂಚಿಗಳ ಮೇಲ್ವಿಚಾರಣೆ ಮತ್ತು ಅನುಷ್ಠಾನಗೊಳಿಸುವುದು ಹಾಗೂ ಶೇಕಡಾ 15% ರಷ್ಟು ಕಾಮಗಾರಿಗಳನ್ನು ಯಾದೃಚ್ಛಿತವಾಗಿ(Random) ಆಯ್ಕೆ ಮಾಡಿ ತಪಾಸಣೆ ಮಾಡುವುದು.

ಸದರಿ ನಿಯಮಗಳನ್ನು ಮುಂದಿನ ದಿನಗಳಲ್ಲಿ ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ ಇಲ್ಲದಿದ್ದಲ್ಲಿ ಅಂತಹ ಸಂಬಂಧಿಸಿದ ಅಧಿಕಾರಿಗಳನ್ನೇ ನೇರ ಹೊಣೆಗಾರರಾಗಿ ಮಾಡುವುದು. ಈ ನಿರ್ದೇಶನಗಳನ್ನು ತಕ್ಷಣದಿಂದಲೇ ಅನುಷ್ಠಾನಗೊಳಿಸಿ ಮತ್ತು ಎಲ್ಲಾ ಕಾ ಮತ್ತು ಪಾ ಕ್ಷೇತ್ರದ ಎಲ್ಲಾ ಹಿರಿಯ ಅಧಿಕಾರಿಗಳಿಗೆ ಖುದ್ದು ಮನದಟ್ಟು ಮಾಡಿ ಕ್ಷೇತ್ರದಲ್ಲಿ ಕಡ್ಡಾಯವಾಗಿ ಜಾರಿ ಮಾಡುವುದರ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.

ಹ. ಟಿ. ರ...
**ನಿರ್ದೇಶಕರು(ತಾಂತ್ರಿಕ)**
**ನಿಗಮ ಕಾರ್ಯಾಲಯ, ಬೆವಿಕಂ**

**ಪ್ರತಿಗಳು:**

1. ಮುಖ್ಯ ಇಂಜಿನಿಯರ್(ವಿ), ನಿಗಮ ಕಾರ್ಯಾಲಯ, ಬೆವಿಕಂ ರವರ ಮುಂದಿನ ಕ್ರಮಕ್ಕಾಗಿ
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ವಾ, ಕಾ ಮತ್ತು ಪಾ ವಲಯ, ಬೆವಿಕಂ ರವರ ಮುಂದಿನ ಕ್ರಮಕ್ಕಾಗಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ವಾ,ಕಾ ಮತ್ತು ಪಾ ವೃತ್ತಗಳು, ಬೆವಿಕಂ ರವರ ಮುಂದಿನ ಕ್ರಮಕ್ಕಾಗಿ.
4. ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನಾ ವಿಭಾಗಗಳು, ಬೆವಿಕಂ ರವರ ಮುಂದಿನ ಕ್ರಮಕ್ಕಾಗಿ.
5. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ), ನಿಗಮ ಕಾರ್ಯಾಲಯ, ಬೆವಿಕಂ ರವರ ಆಪ್ತ ಕಾರ್ಯದರ್ಶಿಗಳು ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ರವರ ಅವಗಾಹನೆಗಾಗಿ ತರಲು ಸೂಚಿಸಿದೆ.
6. ಮುಖ್ಯ ಕಡತ.